# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/1022/2022
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 08/09/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಶಿವಾನಂದ ಮಹಾಂತಪ್ಪ ನಾಗನೂರ, ಕಛೇರಿ ಅಧೀಕ್ಷಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ನಿಯೋಜನೆ ಮೇರೆಗೆ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಹಾಗೂ ಪ್ರಭಾರಿ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬಾಗಲಕೋಟೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಬಾಗಲಕೋಟೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಶ್ರೀ ಶಿವಾನಂದ ಮಹಾಂತಪ್ಪ ನಾಗನೂರ, ಕಛೇರಿ ಅಧೀಕ್ಷಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ನಿಯೋಜನೆ ಮೇರೆಗೆ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಹಾಗೂ ಪ್ರಭಾರಿ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬಾಗಲಕೋಟೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದೂರುದಾರರಾದ ಶ್ರೀ ರವೀಂದ್ರ ತಂದೆ ಹಣಮಂತಪ್ಪ ಪೂಜಾರ ಸಾ: ಕೆಲವಡಿ ಗ್ರಾಮ, ತಾ: ಗುಳೇದಗುಡ್ಡ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ

1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡಿರುತ್ತಾರೆ.

2. **<u>ದೂರಿನ ಸಂಕ್ಷಿಪ್ತ ಸಾರಾಂಶ:-</u>** ದೂರುದಾರರು ಗುಳೇದಗುಡ್ಡ ತಾಲ್ಲೂಕಿನ ಕೆಲವಡಿ ಗ್ರಾಮದ ಖಾಯಂ ರಹವಾಸಿಯಾಗಿದ್ದು, ಎಂ. ಟೆಕ್ ವಿದ್ಯಾಭ್ಯಾಸವನ್ನು ಪೂರೈಸಿರುತ್ತಾರೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದವರು 2018 ರಲ್ಲಿ ಸಮೃದ್ಧಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಯುವಕರಿಗೆ ಸ್ವಯಂ ಉದ್ಯೋಗದಡಿ ಫ್ರಾಂಚೈಸಿ ಮಳಿಗೆಗಳನ್ನು ಆರಂಭಿಸಲು ಅರ್ಜಿಯನ್ನು ಕರೆದಿದ್ದು, ದೂರುದಾರರು ಇಲಾಖೆಯ ವೆಬ್‌ಸೈಟ್‌ನಲ್ಲಿ ನೋಡಿ 2018 ರಲ್ಲಿ ಕ್ಲಾಸಿಕ್ ಪೋಲೊ ಬಟ್ಟೆ ಅಂಗಡಿ ಫ್ರಾಂಚೈಸಿಗಾಗಿ ಅರ್ಜಿ ಹಾಕಿರುತ್ತಾರೆ. 2019 ರಲ್ಲಿ ಸದರಿ ಇಲಾಖೆಯವರು ದೂರುದಾರರನ್ನು ಆಯ್ಕೆ ಮಾಡಿರುತ್ತಾರೆ. ದಿ: 04-09-2020 ರಂದು ಫ್ರಾಂಚೈಸಿ ಬದಲಾವಣೆ ಮಾಡಲು ಅವಕಾಶ ಕೊಟ್ಟ ಮೇರೆಗೆ ದೂರುದಾರರು ಉಡುಪಿ ಬೇಕರಿ ಸ್ವೀಟ್ಸ್ & ಕ್ಯಾಂಡಿಮೆಂಟ್ಸ್ ಫ್ರಾಂಚೈಸಿಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ದಿ: 26-09-2020 ರಂದು ಸದರಿ ಬೇಕರಿ ಕಂಪನಿಯವರು ದೂರುದಾರರಿಗೆ ಫೋನ್ ಮಾಡಿ ಸದರಿ ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಬಗ್ಗೆ ತಿಳಿಸಿ ಲೋಕೆಷನ್ ವೆರಿಫಿಕೇಷನ್ ಮಾಡುವುದಾಗಿ ತಿಳಿಸಿರುತ್ತಾರೆ. ಆ ಕಾರಣಕ್ಕಾಗಿ ದೂರುದಾರರು ಬಾದಾಮಿ ಶಹರದ ಬಸ್ ಸ್ಟ್ಯಾಂಡ್ ಎದುರಿಗೆ ಇರುವ ಅಂಗಡಿಯೊಂದನ್ನು ಬಾಡಿಗೆಯಿಂದ ತೆಗೆದುಕೊಂಡಿರುತ್ತಾರೆ. ಅದರಂತೆ ದಿ: 03-11-2020 ರಂದು ಸದರಿ ಉಡುಪಿ ಬೇಕರಿ ಕಂಪನಿ ವತಿಯಿಂದ ಒಬ್ಬ ವ್ಯಕ್ತಿ ಬಂದಿದ್ದು, ಅವರಿಗೆ ದೂರುದಾರರು ತಾನು ಬಾಡಿಗೆಯಿಂದ ಪಡೆದಿರುವ ಅಂಗಡಿಯನ್ನು ತೋರಿಸಿರುತ್ತಾರೆ. ಅವರು ಲೋಕೆಷನ್ ನೋಡಿ ಎಸ್ಕ್ರೋ ಅಕೌಂಟ್ ತೆರೆಯಲು ಮತ್ತು ಟ್ರೈಪಾರ್ಟಿ ಅಗ್ರಿಮೆಂಟ್ ಮಾಡಿಸಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಾಗಲಕೋಟೆ ಕಛೇರಿಯ ಜಿಲ್ಲಾ ವ್ಯವಸ್ಥಾಪಕರ ಸಹಿ ಪಡೆದು ಅವರಿಗೆ ಕಳುಹಿಸಿಕೊಡುವಂತೆ ತಿಳಿಸಿರುತ್ತಾರೆ.

3. ದಿ: 08-11-2020 ರಂದು ದೂರುದಾರರು ಬಸವೇಶ್ವರ ಬ್ಯಾಂಕ್, ಬಾಗಲಕೋಟೆ ಇವರಲ್ಲಿ ರೂ. 200/- ಮೊತ್ತದ ಈ-ಸ್ಟ್ಯಾಂಪ್ ಪಡೆದು ನಿಗಮದ ಕಛೇರಿಗೆ ಹೋಗಿ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರನ್ನು ಭೇಟಿಯಾದಾಗ ಎದುರುದಾರರು ಅವರ ಕಛೇರಿಯ

ಸಿಬ್ಬಂದಿಯವರೊಬ್ಬರಿಂದ ಈ-ಸ್ಟ್ಯಾಂಪ್ ಮೇಲೆ ಟ್ರೈಪಾರ್ಟಿ ಅಗ್ರಿಮೆಂಟ್ ವಿಷಯ ಹಾಗೂ ಶರತ್ತುಗಳನ್ನು ಗಣಕೀಕರಣ ಮಾಡಿಸಿ ನಿಗಮದ ಎಂ.ಡಿ ಕಛೇರಿಯಿಂದ ಪಂಡ್ ರಿಲೀಸ್ ಮಾಡಿಸಲು ರೂ. 25,000/- ಗಳ ಲಂಚವನ್ನು ಕೇಳಿರುತ್ತಾರೆ. ಆಗ ದೂರುದಾರರು ಆಗುವುದಿಲ್ಲ ಎಂದು ಹೇಳಿದಾಗ ಎದುರುದಾರರು ಸದರಿ ಟ್ರೈಪಾರ್ಟಿ ಅಗ್ರಿಮೆಂಟ್ ಬಾಂಡನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ.

4. ಸದರಿ ಬೇಕರಿ ಕಂಪನಿಯವರು ದೂರುದಾರರಿಗೆ ಮೇಲಿಂದ ಮೇಲೆ ಪೋನ್ ಮಾಡಿ ಟ್ರೈಪಾರ್ಟಿ ಅಗ್ರಿಮೆಂಟ್ ಕಳುಹಿಸಿಕೊಡಲು ಒತ್ತಾಯಮಾಡಿದ್ದರಿಂದ ದೂರುದಾರರು ದಿ: 11-11-2020 ರಂದು ಮಧ್ಯಾಹ್ನ ಸದರಿ ನಿಗಮದ ಕಛೇರಿಗೆ ಹೋಗಿ ಎದುರುದಾರರನ್ನು ಭೇಟಿಯಾದಾಗ ಎದುರುದಾರರು ಒಟ್ಟು ರೂ. 10 ಲಕ್ಷ ಸಹಾಯಧನ ನೀಡುತ್ತಿದ್ದು, 1ನೇ ಕಂತಾಗಿ ಫರ್ನಿಚರ್ ಕೆಲಸ ಮಾಡಿಸಲು ರೂ. 5 ಲಕ್ಷ ಬಿಡುಗಡೆಯಾಗುತ್ತದೆ ನಂತರ 2ನೇ ಕಂತಾಗಿ ಮೆಟಿರಿಯಲ್ ಖರೀದಿ ಮಾಡಲು ರೂ. 5 ಲಕ್ಷ ಬಿಡುಗಡೆಯಾಗುವುದಾಗಿ ತಿಳಿಸಿ ಈ ಮೊದಲು ಹೇಳಿರುವಂತೆ ರೂ. 25 ಸಾವಿರ ಲಂಚ ತಂದಿದ್ದರೆ ಕೊಡಿ ಅಂತ ಹೇಳಿರುತ್ತಾರೆ. ಆಗ ದೂರುದಾರರು ಬಹಳ ಆಗುತ್ತದೆ ಅಂತ ಹೇಳಿದಾಗ ಎದುರುದಾರರು ನಿಗಮದ ಎಂ.ಡಿ ಅವರಿಗೆ ಹಣ ಕಳುಹಿಸಿದರೆ ಮಾತ್ರ ಅವರು ಫಂಡ್ ರಿಲೀಸ್ ಮಾಡುತ್ತಾರೆಂದು ಹೇಳಿರುತ್ತಾರೆ. ಆಗ ದೂರುದಾರರು ತನಗೆ ಒಂದೇ ಬಾರಿಗೆ ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ಎದುರುದಾರರು ಅವರಿಗೆ ಈಗ ರೂ. 15,000/- ಕೊಡಿ ಇನ್ನುಳಿದ ರೂ. 10,000/- ಹಣವನ್ನು 2ನೇ ಕಂತು ಬಿಡುಗಡೆ ಮಾಡುವಾಗ ಕೊಡ್ರಿ ಅಂತ ಹೇಳಿರುತ್ತಾರೆ. ಆಗ ದೂರುದಾರರು ಸದ್ಯಕ್ಕೆ ರೂ. 10,000/- ಗಳನ್ನು ಕೊಡುವುದಾಗಿ ಹೇಳಿ ನಂತರ ರೂ. 15,000/- ಗಳನ್ನು ಕೊಡುವುದಾಗಿ ಹೇಳಿದಾಗ ಎದುರುದಾರರು ಒಪ್ಪಿ ಸದರಿ ಟ್ರೈಪಾರ್ಟಿ ಅಗ್ರಿಮೆಂಟ್ ಮೇಲೆ ಸಹಿ ಮಾಡಿ ಸೀಲ್ ಹಾಕಿ ಬೇಕರಿ ಕಂಪನಿಯವರಿಗೆ ಕಳುಹಿಸಿ ಸಹಿ ಪಡೆದು ಎಕ್ಸ್‌ಕ್ರೋ ಅಕೌಂಟ್ ತೆರೆಯಲು ತಿಳಿಸಿ ಹಣ ತೆಗೆದುಕೊಂಡು ಶುಕ್ರವಾರ ಅಂದರೆ ದಿ: 13-11-2020 ರಂದು ಬರಲು ತಿಳಿಸಿರುತ್ತಾರೆ. ದೂರುದಾರರಿಗೆ ಲಂಚ ಕೊಡಲು ಮನಸ್ಸು ಇಲ್ಲದ್ದರಿಂದ ಅವರು ಈ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

5. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ: 18/11/2020 ರಂದು ಬೆಳಿಗ್ಗೆ 11.30 ಗಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಬಾಗಲಕೋಟೆ ಪೋಲಿಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯವರ ಮುಂದೆ ದೂರು ನೀಡಿದಾಗ ಸದರಿ ಪೋಲಿಸ್ ಠಾಣೆಯಲ್ಲಿ ಮೊ. ಸಂ; 11/2020 ಪಿ.ಸಿ ಕಾಯಿದೆ ಕಲಂ 7 (ಎ) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.
6. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಮಹಾಂತೇಶ ಮಲ್ಲಿಕಾರ್ಜುನ ಹುಲ್ಲೂರ ಮತ್ತು ಶ್ರೀ ಅಶೋಕ ವೇಣು ನಾಯ್ಕ, ಇವರನ್ನು ಬರಮಾಡಿಕೊಂಡು ಅವರುಗಳ ಪರಿಚಯ ಮಾಡಿಕೊಂಡು ದೂರುದಾರರ ಪರಿಚಯ ಮಾಡಿಸಿ ಪ್ರಥಮ ವರ್ತಮಾನದ ವರದಿಯ ನಕಲನ್ನು ಹಾಗೂ ದೂರಿನ ಪ್ರತಿಯನ್ನು ನೀಡಿ ಓದಲು ತಿಳಿಸಿರುತ್ತಾರೆ. ಪಂಚರು ದೂರನ್ನು ಓದಿ ನೋಡಿ ದೂರುದಾರರನ್ನು ದೂರಿನ ಬಗ್ಗೆ ವಿಚಾರಿಸಿದಾಗ ಅವರು ದೂರಿನಲ್ಲಿ ನೀಡಿದ ಎಲ್ಲಾ ಅಂಶಗಳು ನಿಜವಾಗಿರುತ್ತದೆಂದು ತಿಳಿಸಿರುತ್ತಾರೆ.
7. ತನಿಖಾಧಿಕಾರಿಗಳು ಎದುರುದಾರರಿಗೆ ಕೊಡಬೇಕಾದ ಲಂಚದ ಹಣವನ್ನು ಹಾಜರಪಡಿಸಲು ದೂರುದಾರರಿಗೆ ತಿಳಿಸಿದಾಗ ಅವರು ರೂ.500/- ಮುಖಬೆಲೆಯ 20 ನೋಟುಗಳನ್ನು ಒಟ್ಟು ರೂ. 10,000/- ಗಳನ್ನು ಹಾಜರಪಡಿಸಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-1 ರವರು ನೋಟುಗಳ ನಂಬರ್, ಮೌಲ್ಯ ಓದಿ ಹೇಳಿದಂತೆ ಪಂಚ-2 ರವರು ಸದರಿ ನೋಟುಗಳ ಮೌಲ್ಯ ಮತ್ತು ನಂಬರ್‌ಗಳನ್ನು ಒಂದು ಬಿಳಿ ಹಾಳೆಯಲ್ಲಿ ನಮೂದಿಸಿಕೊಂಡಿರುತ್ತಾರೆ.
8. ತನಿಖಾಧಿಕಾರಿಯವರ ಸೂಚನೆಯಂತೆ ಅವರ ಸಿಬ್ಬಂದಿಯವರು ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿರುತ್ತಾರೆ. ಪಂಚ-1 ರವರು ತನಿಖಾಧಿಕಾರಿಗಳ ಸೂಚನೆಯಂತೆ ದೂರುದಾರರ ಅಂಗಶೋಧನೆ ಮಾಡಿ ಅವರು ಧರಿಸಿದ್ದ ಜೀನ್ಸ್ ಪ್ಯಾಂಟಿನ ಹಿಂದಿನ ಕಿಸೆಯಲ್ಲಿ ಅವರ ಸ್ವಂತ ಖರ್ಚಿಗೆ ಅಂತ ಇಟ್ಟುಕೊಂಡಿದ್ದ ರೂ. 710/- ಗಳನ್ನು ಅವರ ಬಳಿಯೆ ಬಿಟ್ಟು ಅವರ ಪ್ಯಾಂಟಿನ ಮುಂದಿನ ಬಲಬದಿ ಕಿಸೆಯನ್ನು ಖಾಲಿ ಮಾಡಿ ಸದರಿ ಪ್ಯಾಂಟಿನ ಬಲಬದಿ ಕಿಸೆಯಲ್ಲಿ ತನಿಖಾಧಿಕಾರಿಗಳು ತಿಳಿಸಿದಂತೆ ಪಂಚ-2 ರವರು ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಪುನಃ ಎಣಿಸಿ ಇಟ್ಟಿರುತ್ತಾರೆ. ನಂತರ ಪಂಚ-2 ರವರು ತಮ್ಮ ಎರಡು ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ ಸೋಡಿಯಂ

ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣದ ಬಣ್ಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಶೇಖರಿಸಿ ಅದನ್ನು ಸೀಲ್ ಮಾಡಲಾಯಿತು. ನಂತರ ತನಿಖಾಧಿಕಾರಿಗಳು ಎಲ್ಲರಿಗೆ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿ ತಾವು ಸಹ ಸೋಪಿನಿಂದ ಕೈಗಳನ್ನು ತೊಳೆದುಕೊಂಡಿರುತ್ತಾರೆ.

9. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರಿಗೆ ಲಂಚ ತಗೋ ಕೊಡುವ ವಿಷಯವಾಗಿ ಮಾತನಾಡಿಸಿದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದ ಮೊಬೈಲ್ ಫೋನ್‌ನ್ನು ಹಾಜರಪಡಿಸಲು ತಿಳಿಸಿದಾಗ ದೂರುದಾರರು ತನ್ನ ಮೊಬೈಲ್ ಫೋನ್‌ನ್ನು ಹಾಜರಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಸದರಿ ಮೊಬೈಲ್‌ನ್ನು ಪರಿಶೀಲಿಸಿ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಪ್ಲೇ ಮಾಡಿ ಪಂಚರಿಗೆ ಕೇಳಿಸಿ ಲ್ಯಾಪ್‌ಟಾಪ್ ಸಹಾಯದಿಂದ ಸಂಭಾಷಣೆಯ ಎರಡು ಸಿಡಿಗಳನ್ನು ಮಾಡಿ ಅವುಗಳನ್ನು ಪ್ರತ್ಯೇಕ ಕವರುಗಳಲ್ಲಿ ಹಾಕಿ ಅಮಾನತ್ತು ಪಡಿಸಿಕೊಂಡು ದೂರುದಾರರ ಮೊಬೈಲ್‌ನ್ನು ಅವರಿಗೆ ಮರಳಿ ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ಹೇಳಿರುವಂತೆ ಅವರ ಬಳಿ ಹೋಗಿ ಅವರು ಕೇಳಿದಾಗ ಹಣ ಕೊಡುವುದು ಅಥವಾ ಎದುರುದಾರರು ಹಣವನ್ನು ಬೇರೆ ಯಾರ ಬಳಿ ಕೊಡಲು ತಿಳಿಸಿರುತ್ತಾರೊ ಅವರ ಕೈಗೆ ಕೊಡುವುದು ಅಥವಾ ಯಾವುದಾದರೂ ಸ್ಥಳದಲ್ಲಿ ಇಡಲು ತಿಳಿಸಿದರೆ ಆ ರೀತಿ ಮಾಡಿ ಹೊರಗಡೆ ಬಂದು ಹೆಬ್ಬೆಟ್ಟು ಮೇಲಕ್ಕೆ ಎತ್ತಿ ತೋರಿಸುವುದರ ಮೂಲಕ ಸೂಚನೆ ನೀಡುವಂತೆ ತಿಳಿಸಿರುತ್ತಾರೆ.

10. ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ ಮಧ್ಯೆ ನಡೆಯುವ ನಡವಳಿಗಳನ್ನು ಗಮನಿಸುವಂತೆ ಹಾಗೂ ದೂರುದಾರರಿಂದ ಹಣ ಪಡೆದುಕೊಳ್ಳುವ ವ್ಯಕ್ತಿ ಲಂಚದ ಹಣವನ್ನು ಎಲ್ಲಿಟ್ಟುಕೊಳ್ಳುತ್ತಾರೆಂಬುದನ್ನು ಗಮನಿಸಿ ಕೇಳಿದಾಗ ಹೇಳುವಂತೆ ತಿಳಿಸಿರುತ್ತಾರೆ. ಪಂಚ-2 ರವರಿಗೆ ತನಿಖಾಧಿಕಾರಿಗಳು ತಮ್ಮ ಜೊತೆಯಲ್ಲಿರುವಂತೆ ತಿಳಿಸಿ ಉಳಿದ ಸಿಬ್ಬಂದಿಯವರಿಗೂ ಸಹ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡರ್‌ನ್ನು ವಹಿಸಿಕೊಟ್ಟು ಅದನ್ನು ಬಳಸುವ ವಿಧಾನ ತಿಳಿಸಿ ಎದುರುದಾರರ

ಬಳಿ ಹೋದಾಗ ಸದರಿ ವಾಯ್ಸ್ ರೆಕಾರ್ಡರ್‌ನ್ನು ಆನ್ ಮಾಡಿ ಎದುರುದಾರರೊಂದಿಗೆ ನಡೆಯುವ ಮಾತುಕತೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತಮ್ಮ ಸಿಬ್ಬಂದಿಯವರ ಮುಖಾಂತರ ತೆಗೆಸಿ ದಿ: 18–11–2020 ರಂದು ಮಧ್ಯಾಹ್ನ 12.50 ಗಂಟೆಯಿಂದ 2.10 ಗಂಟೆಯವರೆಗೆ ಬಾಗಲಕೋಟೆ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿ ಪ್ರಾಯೋಗಿಕ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

11. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ, ತನಿಖಾಧಿಕಾರಿಯವರು ತಮ್ಮ ಇಲಾಖಾ ವಾಹನದಲ್ಲಿ ದೂರುದಾರರನ್ನು ಹಾಗೂ ಪಂಚರನ್ನು ಕೂರಿಸಿಕೊಂಡಿದ್ದು, ಹಾಗೂ ಇನ್ನೊಂದು ಇಲಾಖಾ ವಾಹನದಲ್ಲಿ ಶ್ರೀ ಸಮೀರ್ ಮುಲ್ಲಾ ಪಿ.ಐ ಹಾಗೂ ಸಿಬ್ಬಂದಿಯವರು ಕುಳಿತುಕೊಂಡಿರುತ್ತಾರೆ. ಸದರಿ ವಾಹನಗಳು ಎ.ಪಿ.ಎಂ.ಸಿ ಮಾರ್ಗವಾಗಿ ನವನಗರಕ್ಕೆ ಬಂದು ಜಿಲ್ಲಾಡಳಿತ ಭವನದ ಮುಂದೆ ವಾಹನಗಳನ್ನು ಪಾರ್ಕಿಂಗ್ ಆವರಣದಲ್ಲಿ ನಿಲ್ಲಿಸಿ ಎಲ್ಲರನ್ನು ವಾಹನಗಳಿಂದ ಕೆಳಗೆ ಇಳಿಸಿ ತನಿಖಾಧಿಕಾರಿಗಳು ದೂರುದಾರರಿಗೆ ಹಾಗೂ ಪಂಚ–1 ರವರಿಗೆ ಈ ಮೊದಲು ಕೊಟ್ಟಿರುವ ಸೂಚನೆಗಳನ್ನು ಮತ್ತೊಮ್ಮೆ ನೀಡಿ ಕಳುಹಿಸಿರುತ್ತಾರೆ.

12. ದೂರುದಾರರು ಮತ್ತು ಪಂಚ–1 ರವರು ಕಾಲ್ನಡಿಗೆಯಲ್ಲಿ ಜಿಲ್ಲಾಡಳಿತ ಭವನದ ಹಿಂದಿನ ಗೇಟ್ ಮೂಲಕ 2ನೇ ಮಹಡಿಗೆ ಬಂದು ಎದುರುದಾರರು ಕುಳಿತುಕೊಳ್ಳುವ ರೂಮಿನ ಒಳಗೆ ಹೋದಾಗ ಎದುರುದಾರರು ತಮ್ಮ ಸಿಬ್ಬಂದಿಯವರಿಂದ ಕಂಪ್ಯೂಟರ್‌ನಲ್ಲಿ ಏನೋ ಟೈಪ್ ಮಾಡಿಸುತ್ತಿದ್ದದನ್ನು ನೋಡಿ ದೂರುದಾರರು ಸ್ವಲ್ಪ ಹೊತ್ತು ಕಾಯ್ದು ನಂತರ ಎದುರುದಾರರು ಅವರನ್ನು ತಮ್ಮ ಚೇಂಬರ್ ಒಳಗೆ ಕರೆದುಕೊಂಡು ಬಂದು ಅಕೌಂಟ್ ಓಪನ್ ಮಾಡಿದ ಬಗ್ಗೆ ವಿಚಾರಿಸಿದ ನಂತರ ದೂರುದಾರರು ಹಣ ಕೊಡುವುದಾಗಿ ತಿಳಿಸಿದಾಗ ಎದುರುದಾರರು ರೂ. 20,000/– ಕೊಡಬೇಕಾಗುತ್ತದೆಂದು ಹೇಳಿರುತ್ತಾರೆ. ಆಗ ದೂರುದಾರರು ರೂ. 10,000/– ಗಳಿರುತ್ತವೆಂದು ಹೇಳಿ ಹಣ ಕೊಟ್ಟಾಗ ಎದುರುದಾರರು ಎಡಗೈನಿಂದ ಹಣ ಪಡೆದು ಎಣಿಸದೆ ಅದೇ ಕೈಯಿಂದ ಹಣವನ್ನು ತಮ್ಮ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡು ಬಾಕಿ ಹಣದ ಬಗ್ಗೆ ಕೇಳಿರುತ್ತಾರೆ. ಆಗ ದೂರುದಾರರು ಬಾಕಿ ಹಣ ಸಹಾಯಧನ ಮಂಜೂರಾದ ನಂತರ ಕೊಡುವುದಾಗಿ ಹೇಳಿ ಹೊರಗಡೆ ಬಂದು ಟ್ರ್ಯಾಪ್

ತಂಡಕ್ಕೆ ಸೂಚನೆಯನ್ನು ನೀಡಿರುತ್ತಾರೆ. ಆ ಸಮಯದಲ್ಲಿ ಪಂಚ–1 ರವರು ಸಹ ಅವರ ಜೊತೆಯಲ್ಲಿ ಅವರನ್ನು ಹಿಂಬಾಲಿಸಿಕೊಂಡು ಬಂದು ಬಾಗಿಲ ಬಳಿ ನಿಂತು ಘಟನೆಯನ್ನು ನೋಡಿರುತ್ತಾರೆ.

13. ದೂರುದಾರರು ನೀಡಿದ ಸಿಗ್ನಲ್‌ನ್ನು ಅನುಸರಿಸಿ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರೊಂದಿಗೆ ಹಾಜರಾಗಿ ಎದುರುದಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಸಿಬ್ಬಂದಿಯವರ ಮುಖಾಂತರ ಎದುರುದಾರರ ಎರಡು ಕೈಗಳನ್ನು ಹಿಡಿಸಿ ನಡೆದ ಘಟನೆ ಬಗ್ಗೆ ದೂರುದಾರರನ್ನು ಹಾಗೂ ಪಂಚ–1 ರವರನ್ನು ಕೇಳಿದಾಗ ಅವರು ನಡೆದ ಘಟನೆಯನ್ನು ಯಥಾವತ್ತಾಗಿ ವಿವರಿಸಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಎದುರುದಾರರು ತಮ್ಮ ಎರಡು ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಿರುತ್ತಾರೆ. ಆಗ ಬಲಗೈ ತೊಳೆದ ದ್ರಾವಣದಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ ಆದರೆ ಎಡಗೈ ತೊಳೆದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

14. ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಇಟ್ಟಿರುವ ಸ್ಥಳದ ಬಗ್ಗೆ ವಿಚಾರಿಸಿದಾಗ ಎದುರುದಾರರು ತಮ್ಮ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳ ಸೂಚನೆಯಂತೆ ಪಂಚ–1 ರವರು ಎದುರುದಾರರ ಶರ್ಟಿನ ಕಿಸೆಯಲ್ಲಿದ್ದ ಹಣವನ್ನು ತೆಗೆದು ಹಾಜರುಪಡಿಸಿದ ನಂತರ ಪಂಚರು ಈ ಮೊದಲೇ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿಕೊಂಡಿದ್ದ ನೋಟುಗಳ ನಂಬರ್ ಹಾಗೂ ಮೌಲ್ಯಗಳಿಗೆ ಹೋಲಿಸಿ ಪರಿಶೀಲಿಸಿದಾಗ ಅವು ನಮೂದಿಸಿಕೊಂಡಿದ್ದ ಹಾಳೆಗೆ ಹೋಲಿಕೆಯಾಗಿರುತ್ತದೆ. ತನಿಖಾಧಿಕಾರಿಯವರು ಸದರಿ ಹಣವನ್ನು ಒಂದು ಖಾಲಿ ಕವರಿನಲ್ಲಿಟ್ಟು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಇದಾದ ನಂತರ ತನಿಖಾಧಿಕಾರಿಗಳು ಎದುರುದಾರರ ಟೇಬಲ್ ಡ್ರಾ ಶೋಧನೆ ಮಾಡಿದಾಗ ಟೇಬಲ್ ಡ್ರಾದಲ್ಲಿ ರೂ. 40,000/– ನಗದು ಹಣ ದೊರೆತಿದ್ದು, ಈ ಬಗ್ಗೆ ಅವರು ಎದುರುದಾರರನ್ನು ವಿಚಾರಿಸಿದಾಗ ಎದುರುದಾರರು ಲೋಕಾಪುರ ಹತ್ತಿರ ಚೌಡಾಪುರ ಗ್ರಾಮದ ಹದ್ದಿಯಲ್ಲಿರುವ ತನ್ನ ಜಮೀನದಲ್ಲಿ ಕಬ್ಬು ಕಟಾವು ಮತ್ತು ನಾಟಿ ಮಾಡಿಸುತ್ತಿದ್ದು, ಸದರಿ ಕಬ್ಬು ಕಟಾವು/ನಾಟಿ ಮಾಡುವ ಕಾರ್ಮಿಕರಿಗೆ ಕೊಡಲು ತಂದಿರುವ ಹಣ ಎಂದು

ತಿಳಿಸಿದಾಗ ತನಿಖಾಧಿಕಾರಿಯವರು ಸದರಿ ಹಣವನ್ನು ಮರಳಿ ಎದುರುದಾರರ ವಶಕ್ಕೆ ನೀಡಿರುತ್ತಾರೆ.

15. ತನಿಖಾಧಿಕಾರಿಯವರು ಎದುರುದಾರರು ಹೇಳಿಕೆಯನ್ನು ಬರೆದುಕೊಡಲು ತಿಳಿಸಿದ ಪ್ರಕಾರ ಎದುರುದಾರರು ತಮ್ಮ ಹೇಳಿಕೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ನಾನು ಶಿವಾನಂದ ಎಂ. ನಾಗನೂರ ಪ್ರಭಾರ ಜಿಲ್ಲಾ ವ್ಯವಸ್ಥಾಪಕರು ಬಾಗಲಕೋಟೆ ಬರೆದುಕೊಡುವ ವಿನಂತಿ ಏನೆಂದರೆ, ರವೀಂದ್ರ ಪೂಜಾರ ಸಾ: ಕೆಲವಡಿ ಇವರ ಕಡೆಯಿಂದ ರೂ. 10,000/- ಕೈಗಡ ಸಾಲ ಇಸಿದುಕೊಂಡಿದ್ದು, ನನಗೆ 12 ತಿಂಗಳಿಂದ ಸಂಬಳ ಆಗದೆ ಇರುವುದ್ದರಿಂದ ನಮ್ಮ ತಾಯಿಯವರಿಗೆ ತುಂಬಾ ಆರೋಗ್ಯ ಸರಿಯಿಲ್ಲದ ಕಾರಣ ಕುಟುಂಬದ ಅವಶ್ಯಕತೆಗಾಗಿ ಇಸಿದುಕೊಂಡಿರುತ್ತೇನೆ" ಎಂದು ಬರೆದುಕೊಟ್ಟ ಹೇಳಿಕೆ ಬಗ್ಗೆ ದೂರುದಾರರನ್ನು ತನಿಖಾಧಿಕಾರಿಗಳು ವಿಚಾರಿಸಿದಾಗ ಅವರು "ನೀವು ನೀಡಿದ ಹೇಳಿಕೆ ಅಸಂಬಂಧವಾಗಿದ್ದು, ಶಿವಾನಂದ ನಾಗನೂರು ಇವರು ನನಗೆ ಯಾವುದೇ ಕೈಗಡ ಸಾಲ ಕೇಳಿರುವುದಿಲ್ಲ ಮತ್ತು ನಾನು ಇನ್ನೊಬ್ಬರಿಗೆ ಸಾಲ ಕೊಡುವಷ್ಟು ಆರ್ಥಿಕವಾಗಿ ಸಬಲನಾಗಿರುವುದಿಲ್ಲ. ನಾನು ಈ ಹಿಂದೆ ನಾಗನೂರ ಇವರನ್ನು ಭೇಟಿಯಾದಾಗ ಅವರು ರೂ.25,000/- ಲಂಚ ಕೊಡಲು ಬೇಡಿಕೆಯಿಟ್ಟಿದ್ದು, ನಾನು ಸದ್ಯಕ್ಕೆ ರೂ. 10,000/- ಕೊಡುವುದಾಗಿ ಹೇಳಿದಾಗ ಅವರು ಒಪ್ಪಿಕೊಂಡಿದ್ದರಿಂದ ಈ ದಿನ ನಾನು ಲಂಚದ ಹಣದೊಂದಿಗೆ ಅವರನ್ನು ಭೇಟಿಯಾಗಿ ಹಣ ಕೊಟ್ಟಾಗ ಅವರು ಎಡಗೈಯಿಂದ ಪಡೆದು ಎಣಿಸದೆ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ." ಎಂದು ತಿಳಿಸಿದಾಗ ತನಿಖಾಧಿಕಾರಿಗಳು ಪಂಚ-1 ರವರನ್ನು ವಿಚಾರಣೆ ಮಾಡಿದಾಗ ಅವರು ದೂರುದಾರರು ಎದುರುದಾರರನ್ನು ಅವರ ಛೇಂಬರಿನಲ್ಲಿ ಭೇಟಿಯಾದಾಗ ಅವರು ಹಣ ತಂದ ಬಗ್ಗೆ ವಿಚಾರಿಸಿದ್ದರಿಂದ ದೂರುದಾರರು ಲಂಚದ ಹಣವನ್ನು ಎದುರುದಾರರಿಗೆ ನೀಡಿದಾಗ ಎದುರುದಾರರು ಎಡಗೈಯಿಂದ ಹಣ ಪಡೆದು ಅದೇ ಕೈಯಿಂದ ಶರ್ಟಿನ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ ಮತ್ತು ಆ ವೇಳೆಯಲ್ಲಿ ಕೈಗಡ ಸಾಲದ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

16. ತನಿಖಾಧಿಕಾರಿಗಳು ದೂರುದಾರರಿಗೆ ಲಂಚದ ಕೊಡುವ ಕಾಲದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡ ವಾಯ್ಸ್ ರೆಕಾರ್ಡರ್‌ನ್ನು ಹಾಜರು ಮಾಡಲು ತಿಳಿಸಿದಾಗ ಅವರು ಅದನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಗಳು ವಾಯ್ಸ್ ರೆಕಾರ್ಡರ್‌ನಲ್ಲಿಯ

ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ಅಳವಡಿಸಿ ಪ್ಲೇ ಮಾಡಿ ಪಂಚರಿಗೆ ಕೇಳಿಸಿ ಎರಡು ಸಿ.ಡಿ.ಗಳನ್ನು ಮಾಡಿಕೊಂಡು ಪ್ರತ್ಯೇಕ ಕವರ್‌ಗಳಲ್ಲಿ ಹಾಕಿ ಸೀಲ್ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

17. ಇದಾದ ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಶರ್ಟಿನ ವ್ಯವಸ್ಥೆ ಮಾಡಿ ಎದುರುದಾರರು ತೊಟ್ಟಿರುವ ಶರ್ಟ್‌ನ್ನು ತೆಗೆದು ತಮ್ಮ ಸಿಬ್ಬಂದಿಯವರಿಗೆ ಎದುರುದಾರರ ಶರ್ಟಿನ ಕಿಸೆಯನ್ನು ಹೊರಮಗ್ಗಲು ಮಾಡಿ ತಯಾರಿಸಿಟ್ಟಿರುವ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರು ದ್ರಾವಣ ಹಾಗೂ ಶರ್ಟ್‌ನ್ನು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡಿರುತ್ತಾರೆ.

18. ತನಿಖಾಧಿಕಾರಿಯವರು ಎದುರುದಾರ ಇವರ ಧ್ವನಿ ಪರೀಕ್ಷೆಗಾಗಿ ಕಳುಹಿಸುವ ಕುರಿತು ವಾಯ್ಸ್ ಸ್ಯಾಂಪಲ್‌ಗಳನ್ನು ಪಡೆಯುವುದಾಗಿ ತಿಳಿಸಿ ದಿನಾಂಕ 11/11/2020 ರಂದು ಲಂಚದ ಹಣ ಬೇಡುವ ಕಾಲಕ್ಕೆ ದೂರುದಾರರೊಂದಿಗೆ ನಡೆಸಿದ ಸಂಭಾಷಣೆಯ ಲಿಪೀಕರಣವನ್ನು ಎದುರುದಾರರಿಂದ ಮೂರು ಸಲ ಓದಿಸಿ ತಮ್ಮ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಮುದ್ರಿಸಿಕೊಂಡು ಸಿ. ಡಿ. ಮಾಡಲು ತಮ್ಮ ಸಿಬ್ಬಂದಿಯವರಿಗೆ ತಿಳಿಸಿದಾಗ ಅವರು ಸದರಿ ಮೂರು ಸಂಭಾಷಣೆಗಳನ್ನು ವಾಯ್ಸ್ ರೆಕಾರ್ಡರ್‌ನಿಂದ ಲ್ಯಾಪ್‌ಟಾಪ್‌ಗೆ ವರ್ಗಾಯಿಸಿ ಲ್ಯಾಪ್‌ಟಾಪ್ ಸಹಾಯದಿಂದ ಎರಡು ಸಿ.ಡಿ.ಗಳನ್ನು ಮಾಡಿದಾಗ ತನಿಖಾಧಿಕಾರಿಗಳು ವಾಯ್ಸ್ ಅನಾಲಿಸಿಸ್‌ಗಾಗಿ ಕಳುಹಿಸುವ ಒಂದು ಸಿ.ಡಿ.ಯನ್ನು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಉಳಿದ ಒಂದು ಸಿ.ಡಿ.ಯನ್ನು ಕಛೇರಿ ಪ್ರತಿ ಅಂತ ತನಿಖಾಧಿಕಾರಿಗಳು ಇಟ್ಟುಕೊಂಡಿರುತ್ತಾರೆ.

19. ತನಿಖಾಧಿಕಾರಿಯವರು ಲಂಚದ ಬೇಡಿಕೆ ಹಾಗೂ ಲಂಚ ಕೊಡುವ ಕಾಲದ ಸಂಭಾಷಣೆಗಳು ಇರುವ ಸಿ.ಡಿ.ಗಳನ್ನು ಲ್ಯಾಪ್‌ಟಾಪ್‌ದಲ್ಲಿ ಹಾಕಿ ಶ್ರೀ ಉಮೇಶ್ ಕಾಂಬ್ಳೆ, ಅಟೆಂಡರ್ ಇವರಿಗೆ ಕೇಳಿಸಿದಾಗ ಅವರು ಸದರಿ ಸಂಭಾಷಣೆಗಳಲ್ಲಿ ಮೂಡಿಬಂದ ಧ್ವನಿಗಳ ಪೈಕಿ ಒಂದು ಧ್ವನಿ ಎದುರುದಾರರದ್ದು ಇರುವ ಬಗ್ಗೆ ಧ್ವನಿಯನ್ನು ಗುರ್ತಿಸಿರುತ್ತಾರೆ.

20. ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಎದುರುದಾರರ ಮೇಲಾಧಿಕಾರಿಗಳಾದ ಜಿಲ್ಲಾ ವ್ಯವಸ್ಥಾಪಕರು ಹಾಗೂ ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು ಇವರುಗಳು

ವಿಜಯಪುರದಿಂದ ಬಂದು ಹಾಜರಾದಾಗ ತನಿಖಾಧಿಕಾರಿಗಳು ಅವರಿಗೆ ಎದುರುದಾರರನ್ನು ದಸ್ತಗಿರಿ ಮಾಡಿರುವ ಬಗ್ಗೆ ಮಾಹಿತಿ ನೀಡಿ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

21. ಸದರಿ ಹಣದ ಬಗ್ಗೆ ತನಿಖಾಧಿಕಾರಿಗಳು ಎದುರುದಾರರನ್ನು ವಿಚಾರಿಸಿದಾಗ ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

22. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

23. ಗೌರವಾನ್ವಿತರ ಆದೇಶದ ಮೇರೆಗೆ ಎದುರುದಾರರಿಗೆ ದಿನಾಂಕ 21/04/2022 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರಿಂದ ಸಮಜಾಯಿಷಿ ಕೇಳಲಾಗಿತ್ತು.

24. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 27/05/2022 ರಂದು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಾನು ದೂರುದಾರರಿಂದ ಯಾವುದೇ ಹಣದ ಬೇಡಿಕೆ ಇಟ್ಟಿರುವುದಿಲ್ಲ, ಅದನ್ನು ಪಡೆದಿರುವುದಿಲ್ಲ, ತನ್ನ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದ ಮತ್ತು ಪ್ರಾಮಾಣಿಕತೆಯಿಂದ ನೆರವೇರಿಸಿರುತ್ತೇನೆ ಮತ್ತು ತನ್ನ ವಿರುದ್ಧ ವಿಶೇಷ ನ್ಯಾಯಾಲಯ ಬಾಗಲಕೋಟೆಯಲ್ಲಿ ಸ್ಪೆಶಲ್ ಕೇಸ್ ನಂ. 130/2022 ವಿಚಾರಣಾ ಹಂತದಲ್ಲಿ ಇರುವುದರಿಂದ ಶಿಸ್ತು ಕ್ರಮ ಜರುಗಿಸಬಾರದೆಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

25. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ಸಹಾಯಧನ ಬಿಡುಗಡೆ ಮಾಡಲು ರೂ. 10,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಖುದ್ದಾಗಿ ಸ್ವೀಕರಿಸುವುದರ ಮೂಲಕ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ

ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

26. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

27. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

08/9/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.